Rega No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎಂ. ಏ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

12—1—1962

ಪ ಮುಖ ವರ್ತವಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಕಳ್ಳನಿಗೂ ಕರುಣೆಯಿಲ್ಲ !

ಬಿದರೆಯ ಓರ್ವ ವಕೀಲರ ಮನೆಯಲ್ಲಿ ರೂ 4 ಸಾವಿರ ಬೆಲೆಯ ನಗದು ಮತ್ತು ಆಭರಣಗಳು ಮೊನ್ನೆಯಿಂದ ಪತ್ತೆ ಇಲ್ಲ. ಈ ಪೈಕಿ ಹೆಚ್ಚು ಪತ್ತೆ ಇಲ್ಲದಿರುವದು ಮನೆಯಲ್ಲಿ ವಾಸವಾಗಿರುವ ಓರ್ವ ಪ್ರಾಥಮಿಕ ಶಾಲೆ ಉಪಾಧ್ಯಾಯರದು.

ಗೌಡರ ಬಗ್ಗೆ ಅಸಹನೆ

ಡಾ|| ಆರ್. ನಾಗನಗೌಡರಿಗೆ ಹೊಸಪೇಟೆ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸು ಟಿಕೆಟ್ ಸಿಕ್ಕಿದೆ ಅವರು ಸ್ಪರ್ಧಿಸುತ್ತಿರುವದು 3 ನೆಯ ಬಾರಿ ಆಲ್ಲಿನ ವರ್ತಕರು, ಗಣ್ಯರು ಮತ್ತು ರೈತರು ಸಭೆ ಮಾಡಿ, ಗೌಡರು ಸ್ಪರ್ಧಿಸುವುದಕ್ಕೆ ವಿರೋಧ ಮಾಡಿರುವರು. ಅವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆಯದೆ ಇದ್ದರೆ, ಕಾಂಗ್ರೆಸಿಗರು ರಾಜೀನಾಮೆಯಿತ್ತು, ಪೌರ ಪಂವಾಗಿ ಉಮೇದುವಾರರನ್ನು ನಿಲ್ಲಿಸಬೇಕೆಂದು ತೀರ್ಮಾನಿಸಿತು.

ಸಮಾಪ್ತಿ

ನವ ದೆಹಲಿಯಲ್ಲಿ ನಡೆಯುತ್ತಿದ್ದ ಭಾರತ ಕೈಗಾರಿಕೆ ಫೇರ್ ಬುಧವಾರ ವ್ಯವಹಾರಾಪಾಯಿತು ಕಳೆದ ನವೆಂಬರ್ 14 ರಂದು ಫೇರ್‌ನ್ನು ಉಪಾಧ್ಯಕ್ಷ ಡಾ| ಎಸ್ ರಾಧಾಕೃಷ್ಣರವರು ಉದ್ಘಾಟಿಸಿದ್ದರು

ಹೊಣೆಗಾರಿಕೆ ಇಲ್ಲ

ಗೋವಾದ ಹಿಂದಿನ ಆಡಳಿತಗಾರರ ನೌಕರರು ಪದಾರ್ಥಗಳಿಗೆ ಇತ್ತಿರುವ ಆರ್ಡರ್‌ಗಳಿಗೆ ಈಗಿನ ಸರ್ಕಾರ ಹೊಣೆ ಹೊಲ್ಲವೆಂದು ಲೆಫ್ಟಿನೆಂಟ್ ಗವರ್ನರರಾದ ಕ್ಯಾಂಡೆತ್ ವ್ಯಾಪಾರ ಸಂಸ್ಥೆಗಳಿಗೆ ತಿಳಿಸಿರುವರೆಂದು ಪಂಜಿಂ ವಾರ್ತೆ.

೦೦

ಗಣಿಯಲ್ಲಿ ಸಿಡಿತವಾಗಿ ಮೊನ್ನೆ 6 ಜನರು ಸತ್ತರೆಂದು ಬಿಹಾರಿನ ಜೈಬಾಸದಿಂದ ಸುದ್ದಿ ಬಂದಿದೆ.

ವಿವಿಧ ವಿಷಯಗಳು

ನವ ದೆಹಲಿಯಲ್ಲಿ ಸೇರಿದ್ದ ಪಾರ್ಲಿಮೆಂಟರಿ ಕಾಂಗ್ರೆಸು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ 24 ಸದಸ್ಯರ ಪೈಕಿ 3 ಸದಸ್ಯರು ಹಾಜರಾಗಿದ್ದರು.

ಅಕಾಲಿಗಳ ಪಂಜಾಬಿ ಸೂಬ ಬೇಡಿಕೆಗೆ ಪ್ರಜಾ ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾದ ಶ್ರೀ ಅಶೋಕ ಮೆಹತಾರವರು ಅವ್ಯಕ್ತವಾದಲ್ಲಿ ಪಕ್ಷದ ಜನಾವಣೆ ಭಾಷಣ ಮಾಡುತ್ತಾ ಬೆಂಬಲನೀಡಿರುವ ಬಗ್ಗೆ ವಿಷಾದಿಸಿದ್ದಾರೆ.

ಬರುವ 5 ವರ್ಷಗಳಲ್ಲಿ ಹಿಂದುಳಿದವರ ಅಭಿವೃದ್ಧಿಗೆ ಭಾರತ ಸರ್ಕಾರ 35 ಕೋಟಿ ರೂ. ಖರ್ಚು ಮಾಡುವದು

ಪಾಸಪ್ರತಿಬಂಧ ಯಶಸ್ವಿಯಾಗುವ ಸಲುವಾಗಿ ನೀರಾ ಲೈಸನ್ಸ್‌ಗಳನ್ನ ಹಿಂದಕ್ಕೆ ಪಡೆಯಬೇಕೆಂದು ಮತ್ತು ಸೇಂದಿ ಗಿಡಗಳಿಂದ ಭಟ್ಟಿ ಇಳಿಸುವದನ್ನ ನಿಲ್ಲಿಸಬೇಕೆಂದು ಗುಡಿಬಂಡ ತಾಲ್ಲೂಕು ಬೋರ್ಡಿನ ಸಭೆಯಲ್ಲಿ ಶ್ರೀ ಚಿಂದೂರು ವೆಂಕಟೇಶ ಮೂರ್ತಿಯವರು ತಿಳಿಸಿದರು ಈ ಸಂಬಂಧದ ನಿರ್ಣಯ ಸ್ಥಾಯಿ ಸಮಿತಿಯ ಪರಿತೀಲನೆಗೆ ಹೋಯಿತು.

ಆಂಧ್ರದ ಮುಖ್ಯ ಮಂತ್ರಿ ಶ್ರೀ ಎಸ್ ಸಂಜೀವಯ್ಯನವರು ಹೈದರಾಬಾದಿನಲ್ಲಿ ನಿನ್ನೆ ಹೇಳಿಕೆಯಿತ್ತು, ಮಹಾ ಜನಾವಣೆ ಆದನಂತರ, ತಾವು ವಿಧಾನಸಭೆಗೆ ಅಯ್ಕೆ ಆದರೆ ನಾಯಕತ್ವಕ್ಕೆ ಸ್ಪರ್ಧಿಸುವದಾಗಿ ತಿಳಿಸಿದರು

ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಎಸ್ ಸಂಜೀವರೆಡ್ಡಿಯವರು ಆಂಧ್ರ ವಿಧಾನಸಭೆ ಸ್ಥಾನಕ್ಕೆ ಸ್ಪರ್ಧಿಸುವ ಸಂಭವವಿಲ್ಲವೆಂಬುದಾಗಿ ಹೈದರಾಬಾದು ವಾರ್ತೆ ತಿಳಿಸುತ್ತದೆ.

ವಿಶಾಖಪಟ್ಟಣ ಜಿಲ್ಲೆಯ ಕಂಡಿರು ವಾಸು ಗ್ರಾಮದಲ್ಲಿ ಅಗ್ನಿ ಅನಾಹುತದಿಂದ 104 ಮನೆಗಳು ಭಸ್ಮವಾದವು 70 ವರ್ಷದ ಓರ್ವ ಮುದುಕಿ ಜೀವಂತ ಭಸ್ಮವಾದಳು.

ಇಂಗ್ಲೆಂಡಿನಿಂದ ಔಷಧಿ

ಮಿತಿ ಲಾಂಡು ಎಂಬ ಭೌತ ಅಣು ಶಾಸ್ತ್ರ ಪಂಡಿತರು ಕಾರು ಅವಘಡದಿಂದ ಮೊನ್ನೆಯ ವರಿಗೆ ಆಸ್ಪತ್ರೆಯಲ್ಲಿ ಪ್ರಜ್ಞಾಹೀನರಾಗಿದ್ದರೆಂದು ಮಾಸ್ಕೋ ವಂದ ಲಂಡನ್ನಿನಿಂದ ಅಪೂರ್ವ ಔಷಧವನ್ನು ತರಿಸಿದೆ.

ಹರತಾಳ

ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮುಷ್ಕರಕ್ಕೆ ಬೆಂಬಲಿಸಿ ಕರ್ನೂಲಿನ ಹೋಟಲಿನವರು ಹಾಗೂ ವರ್ತಕರು ಹರತಾಳ ಆಚರಿಸಿದರು.

ಆಹ್ವಾನ

ಒರಿಸ್ಸಾದಲ್ಲಿ ಮುಂದಿನ ಕಾಂಗ್ರೆಸಿನ ಮುಂದಿನ ಕಾಂಗ್ರೆಸಿನ ಅಧಿವೇಶನ ನಡೆಸುವಂತೆ ಉತ್ಕಲ ಕಾಂಗ್ರೆಸು ಕರೆಯನ್ನಿತ್ತಿದೆ.

ಜುಲ್ಮಾನೆ

ಶ್ರೀಮತಿ ಸುಂದರಿ ದುಕೆಸುಲ್ ಖಿಶಾನಿ ಎಂಬವರಿಗೆ ಸಮುದ್ರ ಸಂಕಲ್ಪದ ಕಾನೂನು ಮೀರಿದುದಕ್ಕೆ ರೂ. 92 ಸಹಸ್ರ ದಂಡ ವಿಧಿಸಲಾಯಿತೆಂದು ಬೊಂಬಾಯಿ ವಾರ್ತೆ

ಶಂಕುಸ್ಥಾಪನೆ

ಟಿ ನರಸೀಪುರದ ಹರಿಜನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಿಲಯಗಳ ಕಟ್ಟಡದ ಶಂಕುಸ್ಥಾಪನಾ ಪುಣ್ಯೋತ್ಸವವನ್ನು ಮಂತ್ರಿ ಶ್ರೀ ಎಕ್ ರಾಚಯ್ಯನವರು ನಿನ್ನೆ ನೆರವೇರಿಸಿದರು.

೦೦

ಮೈಸೂರು ರಾಮಾನುಜ ರಸ್ತೆಯಲ್ಲಿರುವ ಶ್ರೀ ಶಿವರಾತ್ರೀಶ್ವರ ವಿದ್ಯಾಪೀಠದಲ್ಲಿ ನಾಳೆ ಸಂಜೆ ಜಗದ್ಗುರು ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಪ್ತಾಹದ ಮುಕ್ತಾಯ ಸಮಾರಂಭ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರುವದು.

ಗೋಪಾಲನ್ ಬಿಡುಗಡೆ

ಕೇರಳ-ಲೈತ ಜಳುವಳಿ ಸಂದರ್ಭದಲ್ಲಿ ಬಂದಿಸಲಾಗಿದ್ದ ಲೋಕಸಭೆಯ ಕಮ್ಯೂನಿಸ್ಟ್ ಸದಸ್ಯ ಶ್ರೀ ಎ ಕೆ ಗೋಪಾಲನ್ ಬಿಡುಗಡೆ ಆದರು ಎಂದು ಎರ್ನಾಕುಲಂ ವಾರ್ತೆ.

ಕರ್ನಾಟಕ ಎಂಬ ಹೆಸರು

ಮೈಸೂರಿಗೆ ಕರ್ನಾಟಕ ಎಂಬ ಹೆಸರಿಡುವದಾಗಿ ಕರ್ನಾಟಕ ಕಮ್ಯೂನಿಸ್ಟ್ ಪಕ್ಷ ಜನಾಪಣಾ ಪ್ರಣಾಳಿಕೆಯಲ್ಲಿ ತಿಳಿಸಿದೆ

ಚೀಣದ ಕೇಳಿಕೆ

ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರದ 1 ಸಾವಿರ ಚದುರ ಮೈಲು ಭೂ ಪ್ರದೇಶವನ್ನು ನವ ಚೀಣಾ ತನ್ನದೆಂತಿದೆ

ಮುಷ್ಕರ

ಮೈಸೂರು ಆಯುರ್ವೇದ ಕಾಲೇಜಿನ 350 ವಿದ್ಯಾರ್ಥಿಗಳು ಈ ದಿನದಿಂದ ಮುಷ್ಕರಿಸಲಿರುವರು ಅವರ ಬೇಡಿಕೆ ಈಡೇರಲಿಲ್ಲವೆಂದು ತಿಳಿದು ಬಂದಿದೆ.

ಕೋತಿಗಳಿಗೆ ಭಯ.

ಜಮ್ಮುವಿನ ಮೇಲೆ ಮೊನ್ನೆ ಮೊನ್ನೆ ವಿಮಾನಗಳ ತಂಡ ಹಾರಿದವು ಅವುಗಳನ್ನು ನೋಡಿ ಕೋತಿಗಳು ಅಡಿಗೆಮನೆ ಹೊಕ್ಕವು ಸಂಜೆ ವಿಮಾನಗಳು ಹೋಗುವ ವರಿಗೆ ಅವು ಅಡಿಗೆ ಮನೆಯಲ್ಲಿದ್ದವು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ

13 ಅಸ್ಟಮಿ ರೇವತಿ

ಸಂಗದ ಪ್ರತಿಫಲ

[ಬರೆದವರು — ಕೆ. ಪಂಚೇಶ್ವರ ಭಟ್ಟರು, ಶಾಂತಿಹಕ್ಕಲು]

(ನಿನ್ನೇ ಸಂಚಿಕೆಯಿಂದ ಮುಂದಕ್ಕೆ)

ಯಾತ್ರಿಕರು— ಸಾಕು ಸಾಕು, ನಿನ್ನ ಪ್ರತಿಭೆ : ನಾವು ಬೇಕಾದರೆ ನಮ್ಮ ಗಂಟು ಮೂಟೆಗಳನ್ನು ಕೊಡುತ್ತೇನೆ ; ಆದರೆ ಒಂದು ಮಾತು ..... ನೀನು ಜನರನ್ನು ಹಿಂಸಿಸಿ ಅವರಿಂದ ಲಾಭ ಪಡೆಯುವುದು ಮಹಾ ಪಾಪಕರ ; ಆದರಿಂದ ಎಷ್ಟು ಕಷ್ಟ ನಷ್ಟಗಳು ಉಂಟಾಗುತ್ತದೆ ಬಲ್ಲೆಯಾ ? ನೀನು ಸತ್ತ ಮೇಲೆ ನರಕ ಪ್ರಾಪ್ತಿಯುಂಟಾಗುತ್ತದೆ; ನಿನ್ನ ಜೊತೆಗೆ ನಿನ್ನ ಹೆಂಡತಿ ಮಕ್ಕಳು ಒಂದು ಬಾಂಧವರೂ ಬರುವುದಿಲ್ಲ ; ನಿನ್ನ ನರಕ ಯಾತನೆಯನ್ನು ಅವರು ಅನುಭವಿಸಲೂ ಆಗುವುದಿಲ್ಲ : ಆಗುವುದಿಲ್ಲ ; ಅವರವರ ಪಾಪಪುಣ್ಯ ಕರ್ಮಗಳು ಅವರಿಗೇ ವಿನಃ ಮತ್ತಾರಿಗೂ ಅಲ್ಲ : ಆದಕಾರಣ ನೀನು ಪುಣ್ಯವಾದ ಕಾರ್ಯವನ್ನು ಮಾಡು ; ಆದರಿಂದ ನಿನಗೆ ಮುಕ್ತಿ ದೊರೆಯುವುದು ; ಆ ಶಿವನ ಪಾದವೂ ಲಭಿಸುವುದು ಎಂದು ಹೇಳಿದರು

ಕಳ್ಳ— ಯಾತ್ರಿಕರೆ, ನೀತಿಯುಕ್ತವಾದ ನಿಮ್ಮ ವಚನ ನನಗೆ ಒಪ್ಪಿಗೆಯಾಯಿತು ; ಆದರೆ ..... ಆ ಪುಣ್ಯ ಕೆಲಸವಾವುದು ; ದಯವಿಟ್ಟು ಹೇಳಿ ಎಂದು ಬೇಡಿದನು

ಯಾತ್ರಿಕರು— ನಾನು ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳಲು ಮಹಾ ಕಾಶಿ ಯಾತ್ರೆಗೆ ಹೊರಟಿದ್ದೇವೆ ; ನೀನೂ ಬಾ : ಕಾಶಿಯಲ್ಲಿರುವ ಭಾಗೀರಥಿಯಲ್ಲಿ ವಿಂದು ವಿಶ್ವೇಶ್ವರನ ದರ್ಶನ ಮಾಡಿದರೆ ಎಂತಹ ಪಾಪವಾದರೂ ಪರಿಹಾರವಾಗುವುದು.

ಕಳ್ಳ— ಹಾಗಾದರೆ ನಾನೂ ನಿಮ್ಮೊಂದಿಗೆ ಬರುತ್ತೇನೆ ; ಇನ್ನು ಮೇಲೆ ಈ ಕೆಟ್ಟ ಕೆಲಸವನ್ನು ಮಾಡುವುದಿಲ್ಲ.

ಅನಂತರ ಕಳ್ಳನೂ ಯಾತ್ರಿಕರೊಂದಿಗೆ ಮಹಾ ಕಾಶಿಯನ್ನು ಸೇರಿದನು : ಹುಟ್ಟಿದಂದಿನಿಂದ ನೀರನ್ನೇ ಕಾಣದ ಆತನ ವೈಯಾ ಭಾಗೀ ಥಿ ಸ್ನಾನದಿಂದ ಶುಭ್ರವಾಯಿತು , ಆತನ ಹೃದಯವೂ ನಿರ್ಮಲವಾಯಿತು ; ಮಾಡಿದ ಪಾಪವೂ ಕಳೆಯಿತು.

ಅಲ್ಲಿಂದ ಪರಮೇಶ್ವರನ ದರ್ಶನಕ್ಕೆ ಆ ಯಾತ್ರಿಕರೂ, ಕಳ್ಳನೂ ಹೊರಟರು ; ಅದೇ ದಾರಿಯ ಪಕ್ಕದಲ್ಲಿ ಒಬ್ಬ ವೃದ್ಧನು ಖಾಯಿಲೆಯಿಂದ ನರಳುತ್ತಾ, ಆತನ ಹೆಂಡತಿಯು ತೊಡೆಯ ಮೇಲೆ ಮಲಗಿದ್ದನು : ಆ ವೃದ್ಧೆಯು ದೈನ್ಯದಿಂದ ಬೇಡುತ್ತಿದ್ದಾಳೆ : ತನ್ನ ಗಂಡನನ್ನು ಬದುಕಿಸುವ ಒಂದು ತೊಟ್ಟು ಮಹಾ ಭಾಗೀರಥಿಯ ನೀರಿಗಾಗಿ ! ಈ ಕೂಗಿನ ಧ್ವನಿಯನ್ನು ಕೇಳಿಯೂ ಕೇಳದಂತೆ ಅಲಕ್ಷ್ಯದಿಂದ ಯಾತ್ರಿಕರೆಲ್ಲರೂ ಈ ಭಕ್ತಾದಿಗಳು ! ಕೊನೆಯಲ್ಲಿ ಬಂದ ಪರಿಶುದ್ಧನಾದ ಕಳ್ಳನಿಗೆ ಈ ವೃದ್ಧರಲ್ಲಿ ಕರುಣೆಯುಂಟಾಯಿತು : ಆಗ ಆತನು ಹತ್ತಿರ ಬಂದು, ಮಹಾತಾಯಿ, ನಿಮ್ಮ ಪತಿಯನ್ನು ಬದುಕಿಸಲು ನಾನು ಸಹಾಯ ಮಾಡುತ್ತೇನೆ ಎಂದ ಹೆಳಿ, ಕೂಡಲೇ ಭಾಗೀರಥಿಯ ನೀರನ್ನು ಎರಡೂ ಕೈಯಲ್ಲಿ ತಂದು, ಆ ವೃದ್ಧನ ಬಾಯಲ್ಲಿ ಹಾಕಿದನು : ಆ ಪವಿತ್ರವಾದ ನಿಷ್ಕಲ್ಮಷವಾದ ಕಳ್ಳನ ಕೈ ನೀರು ಆ ವೃದ್ಧನ ಮೇಲೆ ಬಿದ್ದೊಡನೆ ಕಟ್ಟನೆ ಎದ್ದು ಕುಳಿತನು ; ಆಗ ಪಾರ್ವತಿ ಪರಮೇಶ್ವರರು ಇವನ ನಿಶ್ಚಲ ಭಕ್ತಿ, ದಯೆ, ಪ್ರೀತಿ, ಇವುಗಳನ್ನು ಕಂಡು ಅವನೊಬ್ಬನಿಗೇ ಸಾಕ್ಷಾತ್ಕಾರವನ್ನು ಕರುಣಿಸಿ ಮಾಯವಾದರು.

[ಕಡೇ ಭಾಗ ನಾಳೇ ಸಂಚಿಕೆಯಲ್ಲಿ]

Our Bangalore Sales Depot address—
71 / 4 Arcot Sreenivasachar St., Bangalore 2.

ವುಡ್‌ಲ್ಯಾಂಡ್ಸ್ ವೈಭವ 6 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪಾರೀಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಮನರಂಜನೆಯ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— ಯಶಸ್ವಿ 3 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಜ್ರಮುನಿ, ಹರಿಣಿ, ನರಸಿಂಹರಾಜು

ಕಾಂತಾ ರಾವ್, ರಾಜನಾಳ [ದಿನವಹಿ 3 ಆಟಗಳು]

SHAKTI

SUDHA

A Superb Tonic

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor, Dharma Prachara Nirata M. S. Krishna Rao, at the Sulyadi Press Chamarajapuram, Mysore 4.